## 38. ಸ್ವಾತಂತ್ರ್ಯೋತ್ಸವ ಹೀಗೆ ಆಚರಿಸಿ–ಕೊರೊನಾ ವಾರಿಯರ್ಸ್‌ಗಳನ್ನು ಕಾರ್ಯಕ್ರಮಗಳಿಗೆ ಆಹ್ವಾನಿಸಿ ಗೌರವ ಸಲ್ಲಿಸಿ–ರಾಜ್ಯಗಳಿಗೆ ಕೇಂದ್ರದ ಮಾರ್ಗಸೂಚಿ

ಕೊರೋನಾ ವಿರುದ್ಧದ ಹೋರಾಟದಲ್ಲಿ ಅವಿರತವಾಗಿ ಶ್ರಮಿಸುತ್ತಿರುವ ಕೊರೋನಾ ಯೋಧರನ್ನು ಮತ್ತೊಮ್ಮೆ ಗೌರವಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಆಗಸ್ಟ್ 15ರಂದು ದೇಶಾದ್ಯಂತ ನಡೆಯಲಿರುವ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದ ಅತಿಥಿಗಳನ್ನಾಗಿ ಕೊರೋನಾ ವಿರುದ್ಧ ಹೋರಾಡುತ್ತಿರುವ ವೈದ್ಯರು, ಸ್ವಚ್ಛತಾ ಕಾರ್ಮಿಕರು, ಆರೋಗ್ಯ ಸಿಬ್ಬಂದಿಗಳನ್ನು ಆಹ್ವಾನಿಸಬೇಕು. ಕೊರೋನಾದಿಂದ ಚೇತರಿಸಿಕೊಂಡವರನ್ನೂ ಆಹ್ವಾನಿಸಬಹುದು ಎಂದು ಕೇಂದ್ರ ಸರ್ಕಾರ ಎಲ್ಲ ರಾಜ್ಯಗಳಿಗೆ ಸೂಚಿಸಿದೆ.

**ಪ್ರಮುಖ ಸಲಹೆಗಳು**

- ವೈದ್ಯ ಸಿಬ್ಬಂದಿ, ಪೌರ ಕಾರ್ಮಿಕರು ಸೇರಿ ಕೊರೋನಾ ಯೋಧರನ್ನು ಆಹ್ವಾನಿಸಿ.
- ಕೊರೋನಾದಿಂದ ಗುಣಮುಖರಾದವರನ್ನೂ ಕರೆಸುವ ಮೂಲಕ ಗೌರವಿಸಿ.
- ಕೊರೋನಾ ಸೋಂಕು ತಗುಲುವ ಸಾಧ್ಯತೆ ಇರುವವರನ್ನು ಸಭೆಗೆ ನಿರ್ಬಂಧಿಸಿ.
- ಮಾಸ್ಕ್, ಸ್ಯಾನಿಟೈಸರ್ ಬಳಕೆ ಕಡ್ಡಾಯಗೊಳಿಸಿ, ಸಾಮಾಜಿಕ ಅಂತರ ಕಾಪಾಡಿ.
- ಸಾಹಸಗಳನ್ನು ಮೊದಲೇ ಚಿತ್ರೀಕರಿಸಿ ಪರದೆ ಮೇಲೆ ಪ್ರದರ್ಶಿಸಿ, ವೆಬ್‌ಕಾಸ್ಟ್ ಮಾಡಿ.

ಸೋಂಕು ವ್ಯಾಪಕವಾಗುತ್ತಿರುವ ಹಿನ್ನೆಲೆಯಲ್ಲಿ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮ ಆಯೋಜನೆ ಕುರಿತು ಕೇಂದ್ರ ಸರ್ಕಾರವು ಎಲ್ಲ ರಾಜ್ಯಗಳಿಗೆ ಸಲಹಾವಳಿಗಳನ್ನು ಕಳುಹಿಸಿಕೊಟ್ಟಿದೆ. ಅದರನ್ವಯ ಈ ಬಾರಿ 'ಸ್ವಾತಂತ್ರ್ಯ ದಿನವನ್ನು ಹೆಚ್ಚು ಜನರನ್ನು ಸೇರಿಸದೇ ಆಚರಿಸಬೇಕು. ಸಮಾರಂಭಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು. ಕಾರ್ಯಕ್ರಮವನ್ನು ವೆಬ್‌ಸೈಟ್‌ಗಳ ಮೂಲಕ ನೇರಪ್ರಸಾರ ಮಾಡಬೇಕು' ಎಂದು ಸೂಚಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಕರೆ ನೀಡಿದ 'ಆತ್ಮನಿರ್ಭರ ಭಾರತ'ದ ಸಂದೇಶವನ್ನು ಸ್ವಾತಂತ್ರ್ಯ ದಿನ ಸಮಾರಂಭದಲ್ಲಿ ಪ್ರಚುರಪಡಿಸಲು ತಿಳಿಸಲಾಗಿದೆ.

ಈ ಹಿಂದೆ ಕೂಡಾ ಕೇಂದ್ರ ಸರ್ಕಾರ ಕೊರೋನಾ ಯೋಧರನ್ನು ದೀಪ ಬೆಳಗುವ, ಗಂಟೆ ಬಾರಿಸುವ, ಆಸ್ಪತ್ರೆಗಳ ಮೇಲೆ ವಿಮಾನ ಹಾರಿಸುವ ಮೂಲಕ ಅವರಿಗೆ ಗೌರವ ಸಲ್ಲಿಸಿತ್ತು.

**ಕೆಂಪುಕೋಟೆಗೆ ಮಕ್ಕಳಿಲ್ಲ:** ಕೆಂಪುಕೋಟೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಆಗಸ್ಟ್ 15ರಂದು ನಡೆಯಲಿರುವ ಸ್ವಾತಂತ್ರ್ಯ ದಿನಾಚರಣೆ ಸಮಾರಂಭಕ್ಕೆ ಮಕ್ಕಳನ್ನು ಸೇರಿಸದೇ ಇರಲು ತೀರ್ಮಾನಿಸಲಾಗಿದೆ. ಅತಿಥಿಗಳ ಸಂಖ್ಯೆ ಕೂಡಾ ಒಂದು ಮಿತಿಯಲ್ಲಿ ಇರಲಿದೆ. ಸಮಾರಂಭ ಸರಳ ಆಗಿರಲಿದ್ದು, 'ಸಮಾರಂಭದಲ್ಲಿ ಶಾಲಾ ಮಕ್ಕಳಿಂದ ಯಾವುದೇ ಕಾರ್ಯಕ್ರಮ ಇರುವುದಿಲ್ಲ. ಕೆಲವು ಎನ್‌ಸಿಸಿ ಕೆಡೆಟ್‌ಗಳನ್ನು ಮಾತ್ರ ಆಹ್ವಾನಿಸಲಾಗುತ್ತದೆ. ಸಿಬ್ಬಂದಿ ಪಿಪಿಇ ಕಿಟ್ ಧರಿಸಲಿದ್ದಾರೆ' ಎಂದಿದ್ದಾರೆ.

ಆಧಾರ:ಕನ್ನಡಪ್ರಭ, ದಿನಾಂಕ:25.07.2020